


ಬಾಂಗ್ಲಾ ವಿಮೋಚನಾ ಯುದ್ಧ ಭಾರತದ ಟ್ಯಾಂಕಿನೆದುರು ಅನಿಲ್ ವಿದ್ಯಾರ್ಥಿ

ಅಂತರ್ಯುದ್ಧದಲ್ಲಿ ಪ್ರಾಣ ಕಳೆದುಕೊಂಡವನು. ಇವನ ಪಕ್ಕದಲ್ಲಿರುವವನು ಡೆನಿಸ್ ರಾಯಲ್. ಅಸೋಸಿಯೇಟ್ ಪ್ರೆಸ್ ಸಂಸ್ಥೆಯ ಫೋಟೊಗ್ರಾಫರ್. ವರದಿಗಾರಿಕೆಗೆ ಹೋದವನು. ನಾರ್ದನ್ ಐಲ್ಯಾಂಡಿನಲ್ಲಿ ಹೆಲಿಕ್ಯಾಪ್ಟರ್ ಪತನವಾಗಿ ಸತ್ತನು. ನನ್ನ 'ಫೋಟೊ ಪುಸ್ತಕ'ವನ್ನು ಮೇಲ್ಕಾಣಿಸಿದ ಎಲ್ಲ ವರದಿಗಾರರಿಗೆ ಅರ್ಪಿಸಲಾಗಿದೆ.

◆ **ಈ ಪುಸ್ತಕವನ್ನು ಯಾರು ಸಂಪಾದಿಸಿದ್ದಾರೆ?**

ನನ್ನ ಮಗ ಶ್ರವಣ್ ವಿದ್ಯಾರ್ಥಿ ಮತ್ತು ಎರಿನ್ ಹೇನೆ ಎಂಬ ಹುಡುಗಿ. ಬ್ರಾಡ್‌ಕಾಸ್ಟ್ ಜರ್ನಲಿಸ್ಟ್ ಜಾನ್ ಸೀಬಿಯೊ ಕುಮು ಪ್ರಸ್ತಾವನೆ ಬರೆದಿದ್ದಾರೆ. ಕುಮು, ನನ್ನ ಮಕ್ಕಳಿಗೆ ಫ್ರೆಂಚ್ ಪಾಠ ಹೇಳಿಕೊಟ್ಟವರು. ಈತನ ಅಪ್ಪ ಸ್ವತಂತ್ರ ಕೀನ್ಯಾದ ಮೊದಲ ಆಫ್ರಿಕನ್ ಮ್ಯಾಜಿಸ್ಟ್ರೇಟ್ ಆಗಿ ಪ್ರಮಾಣವಚನ ಸ್ವೀಕರಿಸುತ್ತಿರುವಾಗ ನಾನು ಪಟ ತೆಗೆದಿದ್ದೆ.

◆ **ನೀವು ಹಳೆಯ ಪಟಗಳಲ್ಲಿ ಬಹಳ ಚೆಲುವಾಗಿದ್ದೀರಿ.**

ನನ್ನ ಹೆಂಡತಿ ಕೂಡ ಹೇಳುತ್ತಾಳೆ: 'ನೀನು ಜೀವನದಲ್ಲಿ ಯಾವುದೇ ಸಾಧನೆ ಮಾಡಿರಲಿಲ್ಲ. ಆದರೂ ನೋಡಲು ಚೆನ್ನಾಗಿದ್ದೆ ಎಂದು ಮದುವೆಯಾದೆ' ಎಂದು. ನನಗೆ ಸಿನಿಮಾ ನಟನಾಗುವ ಸಂದರ್ಭ ಒದಗಿತ್ತು. ಕೀನ್ಯಾಕ್ಕೆ ದಿಲೀಪ್ ಕುಮಾರ್,